ತುದಿಯಲ್ಲಿ ದಿಕ್ಕು ತಪ್ಪಿ ಹಾಯುವ, ನೀರಿನ ಪಸೆ ಇಲ್ಲದ ಬಿಳಿಯ ಮಂಜಿನ ಮೋಡದಂತೆನಿಸಿತು. ನಿತ್ಯ ಇದೇ ಕಥೆಯಾದರೆ ಎಲ್ಲಿ ತನ್ನ ಸೆರಗಿನ ತುದಿಗೆ ಕಟ್ಟಿಕೊಂಡು ಬಂದ ದುಡ್ಡೆಲ್ಲ ಕರಗಿ ಕೋಯಂಬೀಡು ಸೇರುವುದಕ್ಕೂ ಕಾಸಿಲ್ಲದೇ ಹೋಗಬಹುದೆಂಬ ಚಿಂತೆಗೆ ಸಿಲುಕಿದಳು. ಆಗ ಅಲ್ಲೇ ಬಸ್‌ಸ್ಟ್ಯಾಂಡ್ ಹೋಟೆಲಲ್ಲಿ ಸೆಲ್ವಿ ರುಬ್ಬುವ ಯಂತ್ರದ ಮುಂದೆ ಕೂತು ಚಟ್ನಿ, ಮಸಾಲೆ ಅರೆಯುವ, ಸೇರುಗಟ್ಟಲೆ ನೆನೆಸಿದ ಅಕ್ಕಿ ಹಾಕಿ ದೋಸೆ ಹಿಟ್ಟು ತಿರಿಯುವ ಉದ್ಯೋಗಕ್ಕೆ ಸೇರಿಕೊಂಡಳು.

ಇಂತಿರುವಲ್ಲಿ ಒಂದು ಸಂಜೆಯವರೆವಿಗೂ ಚೆನ್ನೈ ಸಿಟಿಯ ತಾರೆಯರ ಮನೆಯಂಗಳವನ್ನೆಲ್ಲ ಎಡತಾಕಿದ ಚಿನ್ನಪಳನಿ ಬಸ್‌ಸ್ಟ್ಯಾಂಡ್ ಹೋಟೆಲ್ ಹಿಂಭಾಗಕ್ಕೆ ಬಂದರೆ ಅತ್ತ ಬೆಂಕಿ, ಇತ್ತ ಮಸಿ, ಸುತ್ತ ಹೊಗೆ. ಕಿಟಕಿಯಾಚೆ ದುರ್ವಾಸನೆಯ ಬಚ್ಚಲುನೀರು ಹರಿಯುತ್ತಿದ್ದುದರ ಸಂಧಿಯ ಕಿಷ್ಕಿಂಧದ ಕೋಣೆಯಲ್ಲಿ ಕೂತು ಕಣ್ಣಾಸೆಲ್ವಿ ನಾಳೆಯ ಪದಾರ್ಥಗಳನ್ನು ಒರಳಿಗೆ ಹಾಕಿ ಚಟ್ನಿ, ಅಕ್ಕಿಯ ಹಿಟ್ಟಿಗೆ ಕೈಯಿಟ್ಟು ತಿರುವುತ್ತ ಕೂತಿದ್ದಾಳೆ. ಉಂಡುಂಡೆ ತೆಂಗಿನ ಹೋಳು, ಮೆಣಸಿನಕಾಯಿ ಒರಳುಕಲ್ಲಲ್ಲಿ ನುರಿಯುತ್ತಿರುವಾಗ ಚೂರುಪಾರೆಲ್ಲಾ ಸುತ್ತ ಎಗರಿಬೀಳುತ್ತಿವೆ. ಖಾರದ ಚಟ್ನಿಯ ಶಿಲ್ಕು, ಅಕ್ಕಿಯ ಹಿಟ್ಟು ಸೆಲ್ವಿಯ ಮುಖಕ್ಕೆ ಚಿಮ್ಮುತ್ತಿದೆ.

ಪಳನಿ ಪತ್ನಿಯ ಮುಖ ನೋಡುತ್ತ ನಿಂತ. ಸೆಲ್ವಿಯ ಬಾಯಲ್ಲಿ ಮಾತಿಲ್ಲ. ಅವಳ ಮುಖದಿಂದ ಧಾರಾಕಾರ ಸುರಿಯುತ್ತಿದ್ದ ನೀರು ಹಣೆಯ ಬೆವರಿನದೋ, ಕಣ್ಣ ನೀರಿನದೋ ಗೊತ್ತಾಗಲಿಲ್ಲ. ಸಾವರಿಸಿಕೊಂಡು ಪಳನಿ, 'ಕಣ್ಣಾ ಈ ತಿಂಗಳ ಸಂಬಳ ವಾಂಗಿಪುಡು, ಬೆಂಗಳೂರಿಗೆ ಹೋಗಿಬಿಡುವಾ. ಅಲ್ಲಿ ನನಗೆ ಬಹಳ ಜನ ಗೊತ್ತು' ಅಂದ. ಹಾಗೆ ಪಳನಿ ಬೆಂಗಳೂರಿನಲ್ಲಿ ಜನ ಗೊತ್ತು ಅಂದದ್ದು, ಒಂದು ಸ್ಥಳದಲ್ಲಿ ಇಲ್ಲದ್ದು, ಇನ್ನೊಂದು ಕಡೆ ದೊರಕಬಹುದೇನೋ ಎಂಬ ಭರವಸೆಯಾಗಿತ್ತೇ ಹೊರತು, ಅವನಿಗೆ ಬೆಂಗಳೂರಲ್ಲಿಯೂ ಯಾರೂ ಗೊತ್ತಿರಲಿಲ್ಲ.

ಪಳನಿಯ ಮಾತು ಕೇಳಿಸಿಕೊಳ್ಳುತ್ತ ಗ್ರೈಂಡರಿನೊಳಗೆ ಮೆಣಸಿನಕಾಯಿ, ತೆಂಗಿನ ತುರಿ ಚಟ್ನಿಯನ್ನು ಒಳಗೆ ತಳ್ಳುವಲ್ಲಿ ಸೆಲ್ವಿಯ ಅಂಗೈ ಸಿಕ್ಕಿಕೊಂಡಂತಾಯಿತು. ದಿನವೆಲ್ಲ ಹಿಟ್ಟು, ಚಟ್ನಿ ರುಬ್ಬುತ್ತಿದ್ದ ಸೆಲ್ವಿಯ ಕೈ ಸೋತು ಬಂದಿತ್ತು. ಅಪ್ಪ ಅವ್ವ, ಎಲ್ಲಕ್ಕಿಂತ ತಾನು ಬೆಳೆದ ಸ್ಮಶಾನ ನೆನಪಾಯಿತು. ಅಲ್ಲಿ ಜನವೇ ಇಲ್ಲದೆ ತನ್ನನ್ನು ಯಾರೂ ಮಾತನಾಡಿಸುತ್ತಿರಲಿಲ್ಲ. ಇಲ್ಲಿ ಈ ಘನಂಧಾರಿ ಸಿಟಿಯಲ್ಲಿ ಲಕ್ಷಾಂತರ ಜನರು ಇದ್ದರೂ ಹೇಳುವವರಿಲ್ಲ, ಕೇಳುವವರಿಲ್ಲ ಎನಿಸಿತು.

★★★

ಅದೇ ಹೋಟೆಲ್ ಹಿಂದಿನ ವಪ್ಪಾರೆಯಲ್ಲಿ ಸೆಲ್ವಿಯೊಂದಿಗೆ ಗೋದಿ ಹಿಟ್ಟಿನ ಗೋಣಿಚೀಲದ ಮೇಲೆ ಮಲಗಿದ್ದ ಪಳನಿ ಹಗಲೆಲ್ಲಾ ಹಿಟ್ಟು, ಚಟ್ನಿ ರುಬ್ಬಿದ್ದ ಹೆಂಡತಿಯ ಕೈ ಹಿಡಿದು 'ನೋವೇ' ಎಂದರೆ ಸೆಲ್ವಿ 'ಇಲ್ಲವೇ ಇಲ್ಲ' ಅಂದಳು. ಹಾಗಾದರೆ ದಿನವೆಲ್ಲಾ ಮದರಾಸು ಬೀದಿಗಳಲ್ಲಿ ಅಲೆದ ತನ್ನ ಕಾಲುಗಳೂ ಸೋತಿಲ್ಲ ಅಂದುಕೊಂಡ. ಅದು ಬೆಂಗಳೂರೋ, ಚೆನ್ನೈಯೋ ಎಲ್ಲಿಯಾದರೂ ಸರಿ ನಾಳೆಯಿಂದ ಯಾವುದಾದರೂ ದುಡಿಮೆಯಲ್ಲಿ ತಾನೂ ಊರ್ಜಿತಗೊಳ್ಳಬೇಕೆಂಬ ಹಟ ಪಳನಿಗೆ ಹುಟ್ಟತೊಡಗಿತು. ದಿನವೆಲ್ಲಾ ನೂರಾರು ಮಂದಿ ಹೊಟ್ಟೆ ತುಂಬಿಸುವ ಕಾಯಕ ಮಾಡಿದರೂ ಎಲ್ಲ ಮರೆತವಳಂತೆ ಕೈಗಳು ಸೋತೇ ಇಲ್ಲ ಅನ್ನುವ ಸೆಲ್ವಿ ಸನಿಹವೇ ಇರುವಳು ಅಂದ ಮೇಲೆ ಇನ್ನು ತಾನು ದುಡಿಯುವುದಕ್ಕೇನು ಕಷ್ಟ ಅಂದುಕೊಳ್ಳುವಲ್ಲಿ ಅವನ ಅಂತರಂಗವು ದಿಕ್ಕು ಬದಲಿಸತೊಡಗಿತು. ಸೆಲ್ವಿಗೂ ಕೂಡ ಇದೀಗ ತಾನೇ ಈ ಸಿಟಿಯಲ್ಲಿ ತನ್ನನ್ನು ಯಾರೂ ಮಾತಾಡಿಸುವವರಿಲ್ಲ ಅಂದುಕೊಂಡಿದ್ದೆನಲ್ಲ. ಹಾಗೇನಿಲ್ಲ, ತನ್ನನ್ನು ಹೆಗಲ ಮೇಲೆ ಕೂಸಿನಂತೆ ಹೊತ್ತುಕೊಂಡೇ ನಡೆಯುವ ಏರುಪ್ರಾಯದ ಗಂಡನೇ ಇಷ್ಟು ಸನಿಹ ಇರುವನಲ್ಲ ಅಂದುಕೊಂಡವಳಿಗೆ ಮೈಮನದ ಮೇಲೆಲ್ಲಾ ಹೂವು ಉದುರಿದಂತಾಯಿತು.